# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: | 1203 |
| 2 | ಸದಸ್ಯರ ಹೆಸರು | ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ<br>(ವಿಧಾನಸಭೆಯಿಂದ ಚುನಾಯಿತರಾದವರು) |
| 3 | ಉತ್ತರಿಸುವ ಸಚಿವರು | ಕೃಷಿ ಸಚಿವರು |
| 4 | ಉತ್ತರಿಸುವ ದಿನಾಂಕ: | 15.12.2023. |

<table>
<tr><th>ಕ್ರ.<br>ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr>
<td>ಅ.</td>
<td>ಪ್ರಸ್ತುತ ರಾಜ್ಯದಲ್ಲಿರುವ ರೈತ ಸಂಪರ್ಕ ಕೇಂದ್ರಗಳ ಸಂಖ್ಯೆ ಎಷ್ಟು; ಸ್ವಂತ ಕಟ್ಟಡ ಅಥವಾ ಕಟ್ಟಡದ ಸಮಸ್ಯೆಗಳಿರುವ ರೈತ ಸಂಪರ್ಕ ಕೇಂದ್ರಗಳ ಸಂಖ್ಯೆ ಎಷ್ಟು; ರೈತ ಸಂಪರ್ಕ ಕೇಂದ್ರಗಳಿಗೆ ಮಂಜೂರಾದ ಹುದ್ದೆಗಳ ಸಂಖ್ಯೆ ಎಷ್ಟು: ಪ್ರಸ್ತುತ ಕಾರ್ಯನಿಹಿಸುತ್ತಿರುವ ಸಿಬ್ಬಂದಿಗಳ ಸಂಖ್ಯೆ ಮತ್ತು ಕೊರತೆ ಎಷ್ಟಿದೆ; (ಸಂಪೂರ್ಣ ಮಾಹಿತಿ ನೀಡುವುದು)</td>
<td>
ಪ್ರಸ್ತುತ ರಾಜ್ಯದಲ್ಲಿ ಹೋಬಳಿಗೊಂದರಂತೆ ಒಟ್ಟು 742 ರೈತ ಸಂಪರ್ಕ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ.
<table>
<tr><th>ಒಟ್ಟು ರೈತ ಸಂಪರ್ಕ ಕೇಂದ್ರಗಳು</th><th>ಸ್ವಂತ ಕಟ್ಟಡದಲ್ಲಿ ಕಾರ್ಯ ನಿರ್ವಹಿಸುತ್ತಿರುವ ರೈತ ಸಂಪರ್ಕ ಕೇಂದ್ರಗಳು</th><th>ಬಾಡಿಗೆ ಕಟ್ಟಡದಲ್ಲಿ ಕಾರ್ಯ ನಿರ್ವಹಿಸುತ್ತಿರುವ ರೈತ ಸಂಪರ್ಕ ಕೇಂದ್ರ</th></tr>
<tr><td>742</td><td>585</td><td>157</td></tr>
</table>
ರೈತ ಸಂಪರ್ಕ ಕೇಂದ್ರಗಳಿಗೆ ಮಂಜೂರಾದ ಹುದ್ದೆಗಳ ಸಂಖ್ಯೆ 3054, ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವವರ ಸಂಖ್ಯೆ 773 ಹಾಗೂ ಖಾಲಿ ಇರುವ ಹುದ್ದೆಗಳ ಸಂಖ್ಯೆ 2281 ಆಗಿರುತ್ತದೆ. ಹುದ್ದೆವಾರು ವಿವರ ಕೆಳಗಿನಂತಿದೆ.
<table>
<tr><th>ಹುದ್ದೆಯ ಹೆಸರು</th><th>ಮಂಜೂರಾದ ಹುದ್ದೆಗಳು</th><th>ಭರ್ತಿಯಾದ ಹುದ್ದೆಗಳು</th><th>ಖಾಲಿ ಹುದ್ದೆಗಳು</th></tr>
<tr><td>ಕೃಷಿ ಅಧಿಕಾರಿಗಳು</td><td>2099</td><td>229</td><td>1870</td></tr>
<tr><td>ಸಹಾಯಕ ಕೃಷಿ ಅಧಿಕಾರಿಗಳು</td><td>955</td><td>544</td><td>411</td></tr>
<tr><td>ಒಟ್ಟು</td><td>3054</td><td>773</td><td>2281</td></tr>
</table>
(ಸಂಪೂರ್ಣ ಮಾಹಿತಿಯನ್ನು ಅನುಬಂಧ 1 ಮತ್ತು 2 ರಲ್ಲಿರಿಸಲಾಗಿದೆ, ಸಿಡಿ ಮುಖಾಂತರ ಒದಗಿಸಲಾಗಿದೆ).
</td>
</tr>
</table>

| | | |
|---|---|---|
| ಆ. | ರೈತ ಸಂಪರ್ಕ ಕೇಂದ್ರಗಳಿಂದ ಅನುಷ್ಠಾನಗೊಳ್ಳುತ್ತಿರುವ ರೈತಪರ ಯೋಜನೆಗಳಾವುವು; ರಾಜ್ಯದಲ್ಲಿರುವ ರೈತ ಸಂಪರ್ಕ ಕೇಂದ್ರಗಳಲ್ಲಿ ಸಿಬ್ಬಂದಿಗಳ ಕೊರತೆ ಇದ್ದು, ರೈತಪರ ಯೋಜನೆಗಳನ್ನು ಅನುಷ್ಠಾನಗೊಳಿಸುವಲ್ಲಿ ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ರೈತ ಸಂಪರ್ಕ ಕೇಂದ್ರಗಳಿಂದ ಅನುಷ್ಠಾನಗೊಳ್ಳುತ್ತಿರುವ ರೈತಪರ ಯೋಜನೆಗಳು ಈ ಕೆಳಗಿನಂತಿವೆ.<br>1) ಬೀಜಗಳ ಪೂರೈಕೆ<br>2) ಸಸ್ಯ ಸಂರಕ್ಷಣೆ<br>3) ಕೃಷಿ ಯಾಂತ್ರೀಕರಣ<br>4) ಕೃಷಿ ಸಂಸ್ಕರಣೆ<br>5) ರೈತ ಸಿರಿ & ಸಾವಯವ ಕೃಷಿ<br>6) ಸಾವಯವ ಇಂಗಾಲ ಅಭಿಯಾನ<br>7) ಹೊಸ ಬೆಳೆ ವಿಮಾ ಯೋಜನೆ<br>8) ಬೆಳೆ ಸಮೀಕ್ಷೆ<br>9) ಮುಖ್ಯಮಂತ್ರಿ ರೈತ ವಿದ್ಯಾನಿಧಿ<br>10) ಕೃಷಿ ಭಾಗ್ಯ<br>11) ಹೈಟೆಕ್ ಹಾರ್ವೆಸ್ಟರ್ ಹಬ್<br>12) ಕೃಷಿ ನವೋದ್ಯಮ<br>13) ರಾಷ್ಟ್ರೀಯ ಆಹಾರ ಮತ್ತು ಪೌಷ್ಠಿಕ ಭದ್ರತಾ ಅಭಿಯಾನ<br>14) ಪ್ರಧಾನಮಂತ್ರಿಗಳ ಸೂಕ್ಷ್ಮ ನೀರಾವರಿ ಯೋಜನೆ<br>15) ಕೃಷಿ ವಿಸ್ತರಣೆ ಉಪ ಅಭಿಯಾನ<br>16) ಕೃಷಿ ಯಾಂತ್ರೀಕರಣ ಉಪ ಅಭಿಯಾನ<br>17) ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ (RKVY)<br>18) ರಾಷ್ಟ್ರೀಯ ಖಾದ್ಯತೈಲ ಅಭಿಯಾನ-ಎಣ್ಣೆಕಾಳು<br>19) ಪ್ರಧಾನ ಮಂತ್ರಿ ಕಿರು ಆಹಾರ ಸಂಸ್ಕರಣಾ ಉದ್ದಿಮೆಗಳ ನಿಯಮಬದ್ಧಗೊಳಿಸುವಿಕೆ ಯೋಜನೆ<br>20) ಮಣ್ಣಿನ ಫಲವತ್ತತೆಯ ಯೋಜನೆ |
| ಇ. | ರೈತರ ಜಮೀನಿನ ಮಣ್ಣು ಪರೀಕ್ಷೆ, ಬೀಜೋಪಚಾರ, ರಸಾಯನಿಕ ಗೊಬ್ಬರಗಳ ಬಳಕೆ, ಕ್ರಿಮಿನಾಶಕಗಳ ಬಳಕೆಗಳ ಬಗ್ಗೆ ಜಾಗೃತಿಯಂತಹ ಕಾರ್ಯಗಳು ಸಿಬ್ಬಂದಿಗಳ ಕೊರತೆಯಿಂದ ಕಾರ್ಯಗತವಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಸರ್ಕಾರ ತೆಗೆದುಕೊಂಡ ಕ್ರಮಗಳೇನು? | ರೈತರಿಗೆ ಸಸ್ಯ ಸಂರಕ್ಷಣಾ ಯೋಜನೆಗಳು, ಬೀಜೋಪಚಾರ ಆಂದೋಲನ ಸುರಕ್ಷಿತ ಕೀಟನಾಶಗಳ ಬಳಕೆ ಮತ್ತು ಮಣ್ಣು ಪರೀಕ್ಷೆ ಕುರಿತು ಅರಿವು ಮೂಡಿಸಲು, ಕೀಟ ರೋಗಗಳ ನಿರ್ವಹಣೆಗೆ ಅಗತ್ಯ ತಾಂತ್ರಿಕ ಸಲಹೆಗಳನ್ನು ನೀಡಲು ಇಲಾಖೆಯಲ್ಲಿ ಲಭ್ಯವಿರುವ ಸಿಬ್ಬಂದಿಯ ಜೊತೆಗೆ ಆತ್ಮ ಯೋಜನೆಯ ಸಿಬ್ಬಂದಿ ಮತ್ತು ಸಂಚಾರಿ ಸಸ್ಯ ಆರೋಗ್ಯ ಚಿಕಿತ್ಸಾಲಯಗಳಲ್ಲಿ ಇರುವ ತಾಂತ್ರಿಕ ಸಿಬ್ಬಂದಿಯ ಸೇವೆಯನ್ನು ಪಡೆಯಲಾಗುತ್ತಿದೆ. |

ಸಂಖ್ಯೆ: AGRI/167/ASC/2023

**(ಎನ್. ಚಲುವರಾಯಸ್ವಾಮಿ)**
ಕೃಷಿ ಸಚಿವರು